<u>**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**</u>

<u>**ಹಿರೇಕೆರೂರು.**</u>

<u>**ಸಿ.ಸಿ.ನಂಬರ್:175/2017**</u>

ಸಿಡಬ್ಲ್ಯೂ:1

ಪಿಡಬ್ಲ್ಯೂ:1

| | | |
|---|---|---|
| ಸಾಕ್ಷಿಯ ಹೆಸರು | : | ಗುರುರಾಜ |
| ತಂದೆಯ ಹೆಸರು | : | ಬೀಮಣ್ಣ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಬಜಾಜ್ ಆಲಿಯನ್ಸ ಲೈಫ್ ಇನ್ಸೂರೆನ್ಸ ಕಂಪನಿಯಲ್ಲಿ ಕೆಲಸ |
| ವಾಸಸ್ಥಳ | : | ದಾವಣಗೆರೆ |

ಇಂದು ದಿನಾಂಕ: 06.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆ:**</u> ಮಾನ್ಯ ಎಪಿಪಿಯವರಿಂದ:

ನಾನು ಆರೋಪಿಯನ್ನು ಈ ಮೊದಲೇ ನೋಡಿದ್ದು ಆತ ನಮ್ಮ ಬಜಾಜ್ ಆಲಿಯನ್ಸ ಲೈಫ್ ಇನ್ಸೂರೆನ್ಸ ಕಂಪನಿ, ಹಾವೇರಿಯಲ್ಲಿ ಸೆಕ್ಯೂರಿಟಿ ಗಾರ್ಡ ಆಗಿ ಕೆಲಸ ಮಾಡುತ್ತಿದ್ದರು. 2008 ರಲ್ಲಿ ಅಕ್ಕಮಹಾದೇವಿ ಭರಮಪ್ಪ ಚಕ್ರಸಾಲಿ-ಚಾಸಾ-2 ಎಂಬುವವರು ನಮ್ಮ ಕಂಪನಿಯಲ್ಲಿ 2 ವಿಮಾ ಪಾಲಿಸಿಗಳನ್ನು ತೆಗೆದುಕೊಂಡಿದ್ರು. ಸದರಿ ಪಾಲಿಸಿಗಳು ಒಂದು 10 ಸಾವಿರ ರೂಗಳಿಗೆ, ಮತ್ತೊಂದು 12 ಸಾವಿರ ರೂಗಳಿಗೆ ವಿಮಾ ಪಾಲಿಸಿಗಳನ್ನು ತೆದುಕೊಂಡಿದ್ದರು. 10 ಸಾವಿರ ರೂ ಪಾಲಿಸಿಗೆ 50 ಸಾವಿರ ರೂ ವಿಮಾ ಮೊತ್ತವಿತ್ತು. 12 ಸಾವಿರ ರೂ ಪಾಲಿಸಿಗೆ 4 ಲಕ್ಷದ 8 ಸಾವಿರ ವಿಮಾ ಮೊತ್ತವಿತ್ತು. ದಿನಾಂಕ 02-06-2014 ರಂದು ಚಾಸಾ-2 ರವರು ತೀರಿಕೊಂಡಿದ್ದಾರೆ, ತಾನು ನಾಮಿನಿ ಇರುವುದಾಗಿ ಹೇಳಿ ಆಕೆಯ ಗಂಡ ನಮ್ಮ ಕಂಪನಿಗೆ ಬಂದು 4 ಲಕ್ಷದ 8 ಸಾವಿರ ರೂಗಳನ್ನು ವಿಮಾ ಮೊತ್ತವನ್ನು ಬಿಡಗಡೆ ಮಾಡಬೇಕೆಂದು ಕೇಳಿಕೊಂಡರು.ಅವರು ಹಾಜರಪಡಿಸಿದಂತಹ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ನಾವು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಅವುಗಳನ್ನು ಪರಿಶೀಲಿಸಿ ನಮ್ಮ ಮೇಲಾಧಿಕಾರಿಗಳು ಚಾಸಾ-2 ರವರ ಗಂಡನ ಹೆಸರಿಗೆ ಎಸ್ ಬಿ ಐ ಹಿರೇಕೆರೂರ ಬ್ರಾಂಚ್ ಗೆ ಹಣ ವರ್ಗಾವಣೆ ಮಾಡಿದರು.

2. ದಿನಾಂಕ 21-09-2014 ರಂದು ಆತ ಮತ್ತೆ ಎರಡನೇ ಬಾರಿಗೆ ಬೇಟಿ ನೀಡಿ ತನ್ನದು ಇನ್ನೊಂದು ವಿಮಾ ಪಾಲಿಸಿ 50 ಸಾವಿರ ರೂಗಳಿಗೆ ಇದೆ ಅದನ್ನು ಬಿಡಗಡೆ ಮಾಡಬೇಕೆಂದು

ಕೋರಿದರು. ಆಗ ನನಗೆ ಆ ವ್ಯಕ್ತಿಯ ಮೇಲೆ 2 ವಿಮಾಗಳನ್ನು ಯಾಕೆ ಒಂದೇ ಬಾರಿ ಆತ ಪಡೆದುಕೊಳ್ಳಲಿಲ್ಲ ಎಂದು ಹೇಳಿ ಸಂಶಯ ಹುಟ್ಟಿತು. ನಂತರ ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ್ದು ಅವರು ಫಿನ್ಸ್ ಟೆಕ್ನಾಲಜಿ ಸಿಕಂದರಾಬಾದ್ ರವರಿಗೆ ತನಿಖೆ ಮಾಡಲು ಆದೇಶಿಸಿದರು. ನಂತರ ಅವರು ತನಿಖೆ ಮಾಡಿದಾಗ ಚಾಸಾ-2 ರವರು ಜೀವಂತವಾಗಿದ್ದಾರೆ ಎಂದು ಗೊತ್ತಾಗಿ ನಮಗೆ ವರದಿ ಸಲ್ಲಿಸಿ ನಂತರ ಕಂಪನಿಯ ವ್ಯವಸ್ಥಾಪಕರಾಗಿದಂತಹ ವಿಶ್ವನಾಥ ಕಟ್ಟಿಮನಿ ರವರಿಗೆ ತನಿಖೆ ಮಾಡಲು ವಹಿಸಿಕೊಟ್ಟರು. ಅವರಿಗೂ ಕೂಡ ಚಾಸಾ-2 ರವರು ಜೀವಂತವಾಗಿರುವುದು ಕಂಡು ಬಂದಿರುತ್ತದೆ. ನಂತರ ಈ ಬಗ್ಗೆ ಚಾಸಾ-2 ರವರನ್ನು ವಿಚಾರಣೆ ಮಾಡಿದಾಗ ಆತನಿಗೆ ತನ್ನ ತಪ್ಪಿನ ಅರಿವಾಗಿ ನಮ್ಮ ಕಂಪನಿಗೆ ಡಿ ಡಿ ಮೂಲಕ 4 ಲಕ್ಷದ 8 ಸಾವಿರ ರೂಗಳನ್ನು ವಾಪಸ್ಸು ನೀಡಿರುತ್ತಾರೆ. ನಂತರ ಈ ಬಗ್ಗೆ ಹಂಸಬಾವಿ ಪೋಲಿಸರಿಗೆ ಚಾಸಾ-2 ರವರ ಗಂಡನ ವಿರುದ್ದ ದೂರನ್ನು ನೀಡಿರುತ್ತೇವೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನಂತರ ಪೋಲಿಸರು ನನಗೆ ನೊಟಿಸನ್ನು ನೀಡಿ ದಾಖಲೆಗಳನ್ನು ಹಾಜರಪಡಿಸಲು ಕೋರಿರುತ್ತಾರೆ ಅದರಂತೆ ನಾನು ಪಾಲಿಸಿ ಬಾಂಡ್, ಮರಣ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್, ಚುನಾವಣೆ ಗುರುತಿನ ಚೀಟಿ, ಡೆತ್ ಕ್ಲೇಮ್ ಪಾರಂ ಇವುಗಳನ್ನು ಹಾಜರಪಡಿಸಿರುತ್ತೇನೆ. ಪೋಲೀಸರು ನೀಡಿದ ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ವಿಮಾ ಮಾಡಿಸಲು ನೀಡಿದ ಅರ್ಜಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ದೂರನ್ನು ಸಲ್ಲಿಸಲು ಕಂಪನಿಯಿಂದ ನೀಡಿದ ಅಧಿಕಾರ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಪಾಲಿಸಿ ಬಾಂಡ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಡೆತ್ ಕ್ಲೇಮ್ ಅರ್ಜಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಚಾಸಾ-2 ರವರದ್ದು ಎಂದು ಹೇಳುವ 5 ಮರಣ ಪ್ರಮಾಣ ಪತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-7 ರಿಂದ 11 ಎಂದು ಗುರುತಿಸಲಾಯಿತು.

4. ನಂತರ ಪೋಲಿಸರು ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಮರುಹೇಳಿಕೆಯಲ್ಲಿ ಚಾಸಾ-2 ರವರ ಗಂಡ ತನ್ನ ವಿಮಾ ಬಾಂಡ್ ಗಳನ್ನು ಸರೆಂಡರ್ ಮಾಡಲು ಬಂದಿದ್ದು ಆತನಿಗೆ ಆರೋಪಿ ದಾರಿ ತಪ್ಪಿಸಿ, ಅವರು ಮೋಸದಿಂದ ಹಣ ಪಡೆದುಕೊಳ್ಳವ ಹಾಗೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಆರೋಪಿಯೇ ನಕಲಿ ಸಹಿಗಳನ್ನು ಮಾಡಿ ಕೊಟ್ಟಿರುತ್ತಾರೆ ಎಂದು ನಮಗೆ ತಿಳಿದು ಬಂದಿದ್ದು ಆ ವಿಚಾರವನ್ನೇ ನಾನು ಹೇಳಿರುತೇನೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶವನ್ನು ಕೋರಿದ್ದು ಅದರಂತೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.